ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರ ಸಂಶೋಧನಾ ಕೇಂದ್ರಕ್ಕೆ ಭೂಮಿಯನ್ನು ಒದಗಿಸಲು ತೀರ್ಮಾನಿಸಿದೆಯೇ ? ಹಾಗಿದ್ದಲ್ಲಿ ಭೂಮಿಯ ವಿಸ್ತೀರ್ಣ ಹಾಗೂ ಸ್ಥಳದ ವಿವರಗಳನ್ನು ಒದಗಿಸುವುದು.

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಆ) ಹೌದು.

ಆ) ತೆಂಗು ಅಭಿವೃದ್ಧಿ ಮಂಡಳಿಯ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ರಾಯಸಮುದ್ರ, ಆವ್ಯತಮಹಲ್ ಕಾವಲ್ ಪ್ರದೇಶದಲ್ಲಿ ಸುಮಾರು ೨೮೬ ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದ್ದು ಈ ವಿಷಯ ಪರಿಶೀಲನೆಯಲ್ಲಿದೆ.

## ರಾಜ್ಯದಲ್ಲಿ ಪದವಿಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು

೩೧೮ (೩೭೭) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಪದವಿ ಪೂರ್ವ (ಪ್ರಿಯೂನಿವರ್ಸಿಟಿ) ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯೆಷ್ಟು ?

ಆ) ಸರ್ಕಾರದವರು ನಡೆಸುತ್ತಿರುವ ಹಾಗೂ ಅನುದಾನ ಪಡೆಯುತ್ತಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಹಾಗೂ ಇರುವ ಬೋಧಕ ಸಿಬ್ಬಂದಿಯ ಸಂಖ್ಯೆ ಎಷ್ಟು ?

ಇ) ಸರ್ಕಾರವು ಪಿ.ಯು.ಸಿ. ಮಂಡಳಿಯನ್ನು ರದ್ದುಗೊಳಿಸಲು ಕಾರಣವೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

| | | ಹುಡುಗರು | ಹುಡುಗಿಯರು |
|---|---|---|---|
| ಅ) | ಪ್ರಥಮ ಪಿ ಯು.ಸಿ. | ೧,೪೨,೯೦೭ | ೭೭,೭೧೨ |
| | ದ್ವಿತೀಯ ಪಿ.ಯು.ಸಿ. | ೧,೨೮,೯೬೯ | ೫೮,೫೨೦ |

ಆ) ಅನುದಾನ ಪಡೆಯುತ್ತಿರುವ ಪದವಿ ಪೂರ್ವ ಕಾಲೇಜು: ೭೮. ಸರ್ಕಾರ ನಡೆಸುತ್ತಿರುವ ಪದವಿ ಪೂರ್ವ ಕಾಲೇಜುಗಳ ಮಾಹಿತಿಯನ್ನು ಎಲ್ಲಾ ವಿಭಾಗದ ಸಹ ನಿರ್ದೇಶಕರುಗಳಿಂದ ತರಿಸ ಬೇಕಾದ ಕಾರಣ ಕಾಲಾವಕಾಶಬೇಕಾಗಿದೆ. ಇಲ್ಲಿರುವ ಬೋಧಕ ಸಿಬ್ಬಂದಿಯ ಸಂಖ್ಯೆ:೧೦೧೮.

ಇ) ರಾಷ್ಟ್ರೀಯ ಶೈಕ್ಷಣಿಕ ನೀತಿಯ ಅನ್ವಯ ಪದವಿ ಪೂರ್ವ ಶಿಕ್ಷಣವನ್ನು ಪ್ರೌಢ ಶಿಕ್ಷಣದ ವ್ಯಾಪ್ತಿಯಲ್ಲಿ ತರಲು ಉದ್ದೇಶಿಸಿರುವುದರಿಂದ ಸದರಿ ಮಂಡಳಿಯನ್ನು ರದ್ದು ಮಾಡಲು ಕ್ರಮ ತೆಗೆದುಕೊಂಡಿದೆ.

## ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡ

೩೧೯ (೬೦೦) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸಲು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಆಧ್ಯತೆಯ ಮೇಲೆ ಅಧ್ಯಯನವನ್ನು ಕಡ್ಡಾಯವಾಗಿ ಮಾಡುವಂತೆ ಸರ್ಕಾರದ ನಿರ್ಣಯವನ್ನು ಜಾರಿಗೊಳಿಸಲು ಇರುವ ತಾಂತ್ರಿಕ ತೊಂದರೆಗಳೇನು ?

ಆ) ಈ ತೊಂದರೆಗಳನ್ನು ತೊಡೆದು ಹಾಕಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದ ಶ್ರೇಷ್ಠ ನ್ಯಾಯಾಲಯ ಕೊಟ್ಟಿರುವ ತೀರ್ಪಿನ ಫಲವಾಗಿ ಮೂಲ ಆದೇಶವನ್ನು ಅಸಿಂಧುಗೊಳಿಸಿರುವ ಕಾರಣ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಕಡ್ಡಾಯ ಅಧ್ಯಯನ ಮಾಡಲು ತೊಂದರೆಯಾಗಿದೆ.

ಆ) ರಾಜ್ಯದ ಉಚ್ಚ ನ್ಯಾಯಾಲಯವು ತೀರ್ಪಿನ ವಿರುದ್ಧ ಶ್ರೇಷ್ಠ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ.

## ಅರಣ್ಯ ಜಮೀನಿನಲ್ಲಿ ಬಡರೈತರು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಬಗ್ಗೆ

೩೨೦ (೬೭೦) ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಆನೇಕಲ್ ತಾಲ್ಲೂಕಿನಲ್ಲಿರುವ ಅರಣ್ಯ ಜಮೀನಿನಲ್ಲಿ ಬಡ ರೈತರು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಪ್ರಕರಣಗಳೆಷ್ಟು ಮತ್ತು ಸಾಗುವಳಿ ಯಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ಮತ್ತು ಸರ್ವೆ ನಂಬರುಗಳಾವುವು (ವಿವರವಾದ ಮಾಹಿತಿ ನೀಡುವುದು).

ಇ) ಸದರಿ ಅಕ್ರಮ ಸಾಗುವಳಿ ಮಾಡುತ್ತಿರುವ ಬಡವರಿಗೇ ಜಮೀನನ್ನು ಪಡೆಸಿಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಒಟ್ಟು ಪ್ರಕರಣಗಳ ಸಂಖ್ಯೆ:೫೭ ವಿಸ್ತೀರ್ಣ ೬೪.೭೭ ಹೆಕ್ಟೇರ್ ಕಾದಿಟ್ಟ ಅರಣ್ಯ ಪ್ರದೇಶಗಳಿಗೆ ಸರ್ವೆ ನಂಬರುಗಳು ಇರುವುದಿಲ್ಲ.

ಇ) ಅರಣ್ಯ ಪ್ರದೇಶದಲ್ಲಿ ದಿನಾಂಕ ೨೭-೪-೧೯೭೮ರ ಪೂರ್ವದಲ್ಲಿದ್ದ ಅತಿಕ್ರಮ ಸಾಗುವಳಿ ಗಳನ್ನು ಗುರುತಿಸಲು ಸರ್ಕಾರವು ಸಂಖ್ಯೆ:ಎಫ್‌ಎಫ್‌ಡಿ ೨೩೧ ಎಫ್‌ಜಿವಿಎಲ್ ೮೫ ದಿನಾಂಕ ೭-೩-೧೯೭೭ ರಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ರಚಿಸಿದೆ. ಅವರ ಶಿಫಾರಸ್ಸು ಮೇರೆಗೆ ಅರಣ್ಯ ಸಂರಕ್ಷಣಾ ಕಾಯಿದೆ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿಗೆ ಕಳಿಸಲಾಗುವುದು.

## ಅರಣ್ಯ ಬೆಳೆಸುವ ಕುರಿತು

೩೨೨ (೬೮೭) ಶ್ರೀ ಆರ್. ಎಂ. ಪಾಟೀಲ್ (ಅರಬಾವಿ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಅರಣ್ಯ ಬೆಳೆಸುವಲ್ಲಿ ಯಾವ ಯಾವ ಯೋಜನೆಗಳು ಚಾಲಿಯಲ್ಲಿವೆ ?

ಆ) ಬೆಳಗಾಂ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ತಾಲೆಗಳಲ್ಲಿ ಅರಣ್ಯ ಸಸಿ ನೆಡುವುದು ಮತ್ತು ಅರಣ್ಯ ಬೆಳೆಸುವುದು ಹಾಗೂ ಅದಕ್ಕೆ ತಗುಲಿದ ಖರ್ಚಿನ ಹಣವೆಷ್ಟು ?